ಹಿಂದೆಯೇ ಓಡಿದ. ಎಲ್ಲರೂ ಜೊತೆಗೂಡಿ ಓಡಿದರು. ಆಟದ ಸ್ಥಳಕ್ಕೆ ಬಂದು ಸುಸ್ತಾಗಿ ಕೂತರು.

ಸುಧಾರಿಸಿಕೊಂಡು ಯಾವ ಆಟ ಆಡೋದು ಎಂದು ಚರ್ಚೆ ಶುರುವಾಯಿತು. ಒಬ್ಬ 'ಇವತ್ತು ಮದ್ವೆ ಆಟ ಆಡೋಣ' ಎಂದ. 'ಗಂಡು–ಹೆಣ್ಣು ಯಾರು?' – ಒಬ್ಬಾಕೆಯ ಪ್ರಶ್ನೆ. 'ಇನ್ಯಾರು? ಮೋಹನದಾಸ ಗಂಡು; ಕಸ್ತೂರ್ ಕಪಾಡಿಯಾ ಹೆಣ್ಣು' ಎಂದು ಬಂತು ಉತ್ತರ. ಕೆಲವರು ಕೇಕೆಹಾಕಿ ಸಂಭ್ರಮಿಸಿದರು, ಕಸ್ತೂರ್‌ಗೆ ನಾಚಿಕೆಯಾಯಿತು. ಆದರೂ ಹೇಳಿಯೇ ಬಿಟ್ಟಳು. 'ನಾನು ಈ ಗಾಂಧೀನ್ ಮದ್ವೆ ಆಗ್‌ಬೇಕ? ಈ ಹಟವಾದೀನ್ ಕಟ್ಕೊಳ್ಳಲ್ಲಪ್ಪ ನಾನು' ಎಂದು ಮೂಗು ಮುರಿದಳು. ಗಾಂಧಿಯೇನೂ ಸುಮ್ಮನಿರಲಿಲ್ಲ; 'ನನಗಿಂತ ಒಳ್ಳೆ ಗಂಡ ಯಾರ್ ಸಿಗ್ತಾರೆ ನಿಂಗೆ? ಯಾವಾಗ್ಲೂ ಕಾಲ್ ಕೆರ್ಕೊಂಡ್ ನಿಂತಿರ್ತೀಯ?' ಎಂದ.

'ಕಾಲ್‌ಕೆರ್ಕೊಂಡ್ ನಿಂತ್ಕೊಳ್ಳೋದು ನೀನು; ನೀವೆಲ್ಲ ಗಂಡುಸ್ರು, ನಮಿಗ್ ಬರೀ ನಿಮ್ ಕಾಲ್ ನೋಡ್ಕಂಡ್ ನಿಂತ್ಕಳ್ಳಾದ್ ಹೇಳ್ಕೊಟ್ಟಿದ್ದೀರಿ' – ಕಸ್ತೂರ್ ತಿರುಗುಬಾಣ ಬಿಟ್ಟಳು.

'ಅದು ಹಿಂದಿನಿಂದ ಬಂದಿದೆ.'

'ಹಿಂದಿನಿಂದ ಬಂದಿರಾದೆಲ್ಲ ಸರಿ ಅನ್ನಾದಾದ್ರೆ ಮಲ ಹೊರೋದನ್ನ ಯಾಕ್ ಬೇಡ ಅಂದೆ.'

'ಅದು ಬೇರೆ, ಇದು ಬೇರೆ.'

'ಬೇರ್ ಬೇರೆ ಇರಬಹುದು. ಅದನ್ನೂ ಒಪ್ಪಲ್ಲ ಇದನ್ನೂ ಒಪ್ಪಲ್ಲ ಅಂತ ಹೇಳ್‌ಬೇಕು. ಇಷ್ಟಕ್ಕೂ ನಾನೇನ್ ಗಂಡನ್‌ಗೆ ತೊಂದ್ರೆ ಕೊಡೋ ಹೆಂಗ್ಸಲ್ಲ. ನಮ್ಮನೇಲಿ, ಸಾವಿತ್ರಿ, ಸತಿ ಅನಸೂಯ, ಸೀತೆ ಕತೆ ಹೇಳಿ ನಾನ್ ಹೇಗಿರ್ಬೇಕು ಅಂತ ಆಗ್ಲೇ ಕಲಿಸ್ಬಿಟ್ಟಿದಾರೆ.'

'ನಿನ್ ಸೀತೆ ಕತೇಲಿ ಶ್ರೀರಾಮಾನೂ ಇರ್ತಾನಲ್ವ?'

'ಇರ್ತಾನೆ.'

'ಚೆನ್ನಾಗ್ ತಿಳ್ಕೊ, ನಾನು ಶ್ರೀರಾಮನ್ ಕತೆ, ಸತ್ಯ ಹರಿಶ್ಚಂದ್ರನ್ ಕತೆ, ಕೇಳ್ ಬೆಳೀತಾ ಇರೋನು.'

ಇವರ ವಾಗ್ವಾದ ಕೇಳಿ ಕನಲಿದ ಸ್ನೇಹಿತನೊಬ್ಬ, 'ಅಪ್ಪಾ ಹರಿಶ್ಚಂದ್ರ, ಸ್ವಲ್ಪ ನಿಮ್ ಜಗಳ ನಿಲ್ಲುಸ್ತೀರ ಇಲ್ವ ಹೇಳಿ. ಈಗ್ ನಾವೇನ್ ನಿಮಿಗ್ ನಿಜವಾಗ್ಲೂ ಮದ್ವೆ ಮಾಡ್ತೀವ? ಇದು ಆಟ, ಬರೀ ಆಟ' ಎಂದು ಹೇಳಿದಾಗ ಕಸ್ತೂರ್‌ಗೆ ಅದೇನನ್ನಿಸಿತೊ, 'ಮದ್ವೆ ಅನ್ನೋದು ಬರೀ ಆಟಾನ' ಎಂದು ಕೇಳಿದಳು. ಆಗ ಆತ 'ನಿಜವಾದ ಮದುವೆ, ಆಟ ಅಲ್ಲ. ಈಗ ಆಡೋದು ಮಾತ್ರ ಆಟ' ಎಂದು ಉತ್ತರಿಸಿದ. ಕಸ್ತೂರ್ ಗೆಳತಿಯರು 'ಮೊದ್ಲು ಆಟ ಶುರುಮಾಡ್‌ಬಾರ್ದ' ಎಂದು ಒತ್ತಾಯಿಸಿದರು. ಒಬ್ಬಾಕೆಯಂತೂ ಕಸ್ತೂರ್‌ಗೆ ನೇರಾಗಿ ಹೇಳಿದಳು.

'ನೋಡು ಕಸ್ತೂರ್, ನೀನು ಒಪ್ಪದೇ ಇದ್ರೆ ಮೋಹನದಾಸನಿಗೆ ನಾನೇ ಹೆಂಡ್ತಿ ಆಗ್ತೀನಿ.'

'ನಿಜವಾಗಲೂ?' – ಕಸ್ತೂರ್ ಕುತೂಹಲಿಯಾಗಿ ಕೇಳಿದಳು.

'ನಾನೇ ಹೆಂಡತಿ ಆಗ್ತೀನಿ; ಆಗೇ ಆಗ್ತೀನಿ.'

'ನೀನ್ ಹೆಂಡ್ತಿ ಆಗೋಕ್ ನಾನ್ ಬಿಡ್ತೀನ?' – ಕಸ್ತೂರ್ ದೃಢವಾಗಿ ಹೇಳಿದಳು.

'ಹಾಗಿದ್ರೆ ಸುಮ್ನೆ ಅವ್ನ ಪಕ್ಕ ಕೂತ್ಕೊ' ಗೆಳತಿ ಹೇಳಿದಳು.

ಮೋಹನದಾಸಗಾಂಧಿ ಮತ್ತು ಕಸ್ತೂರಳನ್ನು ಅಕ್ಕಪಕ್ಕ ಕೂಡಿಸಿದರು. ಗಾಂಧಿ ಹೆಮ್ಮೆಯಿಂದ ಕಸ್ತೂರ್ ಕಡೆ ನೋಡಿದ. ಕಸ್ತೂರ್ ಒಳಗೊಂದು ಅಲೆಗಳ ಸರಣಿ. ತಾನೇಕೆ ಹೀಗೆ ವರ್ತಿಸಿದೆ? ಗೆಳತಿಗೆ ಯಾಕೆ ಈ ಜಾಗ ಬಿಟ್ಟುಕೊಡಲಿಲ್ಲ? ತನ್ನ ಮತ್ತು ಗಾಂಧಿ ನಡುವಿನ ಜಗಳ, ಸಲಿಗೆಯ ಹೂಮಾಲೆಯೆ?

ಅಷ್ಟರಲ್ಲಿ ಗೆಳತಿಯರು ಸಿದ್ಧವಾದರು. ಹಣೆಗೆ ಕುಂಕುಮ ಇಡುವಂತೆ ಅಭಿನಯಿಸಿದರು. ಗೆಳೆಯರು ವಾದ್ಯವಾದನದ ಅಭಿನಯ ಮಾಡಿದರು. ಗೆಳೆಯ ಗೆಳತಿಯರೆಲ್ಲ ಸಾಂಪ್ರದಾಯಿಕ ನೃತ್ಯ ಮಾಡಿದರು.

ಕಸ್ತೂರ್ ಕಣ್ಣಲ್ಲಿ ಗಾಂಧಿ
ಗಾಂಧಿ ಕಣ್ಣಲ್ಲಿ ಕಸ್ತೂರ್
ಕಣ್ಣುಗಳಲ್ಲಿ ಹುಟ್ಟಿತು ಕವಿತೆ
ಎದುರಿಗೆ ಕುಣಿಯಿತು ಕತೆ
ಗಂಡು ಹೆಣ್ಣಿನ ಮೆರವಣಿಗೆ
ಕಾದಂಬರಿಯಂತೆ ಬೆಳವಣಿಗೆ!

ಗಂಡು–ಹೆಣ್ಣನ್ನು ಅಭಿನಂದಿಸಿದರು. ಎಲ್ಲರೂ ಸಂಭ್ರಮದಿಂದ ಅಭಿನಯಿಸಿದರು. ಆಟ ಮುಗಿಸಿ ಆನಂದಿಸಿದರು. ಮನೆಯ ಕಡೆ ಹೊರಟರು.

ಕಸ್ತೂರ್ ಕಪಾಡಿಯಾ ಮನೆಗೆ ಬಂದಾಗ ಆಶ್ಚರ್ಯ ಕಾದಿತ್ತು. ಹಿರಿಯರು ಕೂತು ಕಸ್ತೂರ್ ಮದುವೆಯ ಬಗ್ಗೆಯೇ ಮಾತುಕತೆ ನಡೆಸಿದ್ದರು. ಮಾತುಕತೆ ನಡೆಯುತ್ತಿರುವಾಗಲೇ ಕಸ್ತೂರ್ ಆಗಮಿಸಿದ್ದು ನೋಡಿ ತುಸುಕಾಲ ಸುಮ್ಮನಾದರು. ತಾಯಿ 'ಆಟ ಮುಗೀತಾ?' ಎಂದು ಕೇಳಿದಾಗ ಕಸ್ತೂರ್ ಹೌದೆಂದಳು. 'ಹೋಗಿ ಕೈಕಾಲು ಮುಖ ತೊಳ್ಕೊ' ಎಂಬ ತಾಯಿಯ ಮಾತಿನಂತೆ ಒಳಹೋದಳು. ಇಲ್ಲಿ ಮದುವೆಯ ಮಾತು ಮುಂದುವರೆಯಿತು. ಒಂದು ಘಟ್ಟದಲ್ಲಿ ಒಬ್ಬರು ಹೀಗೆಂದರು:

'ನಿಮ್ಮ ಮಗಳಿಗೆ ಈಗ ಹದಿಮೂರು ವರ್ಷ. ಹತ್ತು ವರ್ಷ ದೊಡ್ಡವನಾಗಿರೊ ಗಂಡಿನ್ ಜೊತೆ ಮದ್ವೆ ಮಾಡ್‌ಬೇಕು. ಗಂಡು ಹತ್ತು ವರ್ಷ ದೊಡ್ಡೋನಾಗಿದ್ರೆ ಆತನ್ ಜೊತೆ ಆಟ ಆಡೋದ್ ಹೇಗೆ?' ಎಂದು ದನಿ ಬಂದತ್ತ ನೋಡಿದರೆ, ರೂಮಿನ ಬಾಗಿಲಲ್ಲಿ ಕಸ್ತೂರ್ ನಿಂತಿದ್ದಳು. ಮತ್ತೆ ಹೇಳಿದಳು:

'ಹೌದು ಮತ್ತೆ; ಅಷ್ಟು ದೊಡ್ಡೋನ್ ಜೊತೆ ನಾನ್ ಆಟ ಆಡೋಕ್ ಆಗುತ್ತ?'

ಹಿರಿಯರು ನಕ್ಕರು.

ಕಸ್ತೂರ್‌ಗೆ ಅದು ಸರಿಬರಲಿಲ್ಲ.

ಪ್ರಶ್ನೆಗೆ ಉತ್ತರ ಸಿಕ್ಕಿರಲಿಲ್ಲ.

'ಯಾಕ್ ನಗ್ತೀರ? ನನ್ ಪ್ರಶ್ನೇಗ್ ಉತ್ತರ ಕೊಡಿ' ಎಂದು ಜಗ್ಗಿಸಿದಳು.

'ಮದುವೆ ಆಗೋದು ಆಟ ಆಡೋಕ್ ಅಲ್ಲಮ್ಮ, ಜೀವನ ನಡ್ಸೋಕೆ' ಎಂದರು ಹಿರಿಯರು. ಕಸ್ತೂರ್ ಥಟ್ಟನೆ ಕೇಳಿಬಿಟ್ಟಳು:

'ಜೀವನ ನಡ್ಸೋದೂ ಆಟಾನ?'

'ಆಟ ಅಲ್ಲ ಪಾಠ' ಎಂದಳು ತಾಯಿ ಬೇಸರದ ದನಿಯಲ್ಲಿ. ಜೊತೆಗೆ, 'ಇಲ್ಲಿ ದೊಡ್ಡೋರ್ ಮಾತಾಡ್ತಿದ್ದೀನಿ, ನೀನ್ ಒಳ್ಗಡೆ ಹೋಗು ಸುಮ್ನೆ. ಮದ್ವೆ ವಿಷ್ಯ ನಮಿಗ್ ಬಿಟ್ಬಿಡು.'

ಕಸ್ತೂರ್ ಒಳಹೋದಳು.

ರೆಕ್ಕೆಯಿದ್ದರೂ ಹಕ್ಕಿ ಹಾರಬಾರದೆ?
ನಾಲಗೆಯಿದ್ದರೂ ಹೆಣ್ಣು ನುಡಿಯಬಾರದೆ?
ಜಡರೂಢಿ ಬೇಲಿಯ ಬಂಧಿ!
ಬಂದೀತೆ ಬಿಡುಗಡೆಯ ನಾಂದಿ?

ಹೀಗೆ ಅನ್ನಿಸಿರಬಹುದೇನೊ ಕಸ್ತೂರ್ ಮನದಲ್ಲಿ! ಆದರೆ ಆಕೆಯ ಮಾತಿಗಿಲ್ಲಿ ಅವಕಾಶವಿಲ್ಲ. ಇಲ್ಲಿ ಮಾತು ಮುಂದುವರೆಯಲೂ ಇಲ್ಲ. ತಾಯಿ ವ್ರಜ್‌ಕುನ್ವಾರ್ 'ಕಸ್ತೂರ್‌ನ ಮೋಹನದಾಸನಿಗೆ ಕೊಟ್ಟು ಮದ್ವೆ ಮಾಡೋದು ಅಂತ ಹಿಂದೇನೇ ಮಾತಾಗಿದೆ' ಎಂದು ಮುಕ್ತಾಯ ಮಾಡಿದರು. ಸಲಹೆ ಕೊಟ್ಟವರು ಪೆಚ್ಚಾದರು! 1883 ಮೇ ತಿಂಗಳಲ್ಲಿ ನಡೆದ ಮದುವೆಗೆ ಹಾಜರಾದರು.

* * *

ಸಬರಮತಿ ಆಶ್ರಮ; ವೃದ್ಧೆ ಕಸ್ತೂರ್ ಮುಖದಲ್ಲಿ ಮಂದಹಾಸ.

ಕಣ್ಣಮುಂದೆ ಆದಂತೆ ಮದುವೆ
ಒಲವು ಹೊನಲಾದಂತೆ;
ಸಂಪ್ರದಾಯದ ಸೆರಗು ಹೊದ್ದ ಚೆಲುವೆ
ಆಟ ಅರಳಿ ಹೂವಾದಂತೆ.

ಗಾಂಧಿನೋಡಿದರು; ಕಸ್ತೂರ್‌ಬಾ ಯಾವುದೋ ಭಾವಲೋಕಕ್ಕೆ ಹೋದಂತೆ ಕಂಡರು. ಎಷ್ಟೋ ವರ್ಷಗಳ ನಂತರ ಕಂಡ ಮಂದಹಾಸವನ್ನು ನಂದಿಸುವುದು ತರವಲ್ಲವೆಂದು ಮೌನವಾಗಿ ಕೂತರು; ಕಸ್ತೂರ್‌ಬಾ ವಾಸ್ತವಕ್ಕೆ ಬರಲೆಂದು ಕಾದರು. ಬದುಕಿನುದ್ದಕ್ಕೂ ಏಣಿ ಏರಿ ಇಳಿಯುವ, ಮತ್ತೆ ಏರುವ, ಮತ್ತೊಮ್ಮೆ ಇಳಿಯುವ – ಸಂತೋಷ ಮತ್ತು ಸಂಕಟಗಳ ಏರಿಳಿತವುಂಡ ಕಸ್ತೂರ್‌ಬಾ, ಬೇಗ ವಾಸ್ತವಕ್ಕೆ ಬಂದರು.

'ಇಷ್ಟು ಹೊತ್ತು ಎಲ್ಲಿಗ್ ಹೋಗಿದ್ದೆ ಕಸ್ತೂರ್?'

'ಊರಿಗೆ?'

'ಯಾವ ಊರಿಗೆ?'

'ಹೆಸರಿಲ್ಲದ ಊರಿಗೆ.'

'ಹೆಸರೇ ಇಲ್ಲದ ಊರು ಇರುವುದೆಲ್ಲಿ ಸಾಧ್ಯ?'

'ಸಾಧ್ಯ'

'ಅದೇ ಹೇಗೆ, ಎಲ್ಲಿ?'

'ಮನಸ್ಸಿನಲ್ಲಿ; ಭಾವನೆಗಳಲ್ಲಿ.'

ಗಾಂಧಿಗೆ ಮಾತು ಹೊರಡಲಿಲ್ಲ.

'ಮನಸ್ನಲ್ ಮೂಡೊ ಊರಿಗೆ ಹೆಸರು ಕೊಟ್ರೆ ಮನಸ್ಸು ಅನ್ನೋದಕ್ಕೆ ಅರ್ಥ ಇರೊಲ್ಲ.'

ಗಾಂಧಿ ಸುಮ್ಮನೆ ನೋಡಿದರು.

ಮತ್ತೆ ಕಸ್ತೂರ್‌ಬಾ ನುಡಿದರು.

'ಭಾವನೆಗಳಿಗೆ ಬೋರ್ಡ್ ಹಾಕೋದು ಒಂದೇ ಬಂಧಿಸೋದೂ ಒಂದೇ.'

ಗಾಂಧಿ ಕುತೂಹಲಿಯಾದರು.

ಕಸ್ತೂರ್‌ಬಾ ಬಾಯಲ್ಲಿ ಎಂಥ ಅರ್ಥಪೂರ್ಣನುಡಿ!

'ನಾನು ನಮ್ಮಿಬ್ಬರ ಮದ್ವೆ ಊರಿಗ್ ಹೋಗಿದ್ದೆ. ಮದ್ವೆ ಅಂತ ಆಟ ಆಡಿದ್ ವಯಸ್ಸು. ಆಯ್ಕೆಗೆ ಅವಕಾಶವೇ ಇಲ್ದೆ ಇರೊ ಸಂಪ್ರದಾಯ. ಬಾಲ್ಯ ವಿವಾಹ ನಿಷಿದ್ಧ ಆಗ್ದೆ ಇರೊ ಕಾಲ. ದೊಡ್ಡೋರೇ ನಮ್ಮ ಮದ್ವೇನ ನಿರ್ಧಾರ ಮಾಡ್ತಿದ್ರು. ನಾವು